KABC030560482025

SANJEEVKUMAR S HINDODDI

Digitally signed by SANJEEVKUMAR S HINDODDI
Date: 2026.07.07 18:12:57 +0530

Presented on : 01-09-2025
Registered on : 01-09-2025
Decided on : 07-07-2026
Duration : 0 years, 10 months, 6 days

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**

ಉಪಸ್ಥಿತರು

**ಸಂಜೀವ್ ಕುಮಾರ್.ಎಸ್. ಹಿಂದೊಡ್ಡಿ**

ಬಿ.ಕಾಂ. ಎಲ್‌ಎಲ್. ಎಂ.,

31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,

ಬೆಂಗಳೂರು ನಗರ

**ದಿನಾಂಕ 07ನೇ ಜುಲೈ 2026**

**ಸಿಸಿ ಸಂಖ್ಯೆ–32253/2025**

**ಫಿರ್ಯಾದುದಾರರು–** ರಾಜ್ಯದ ಪರ ಪೀಣ್ಯ ಪೊಲೀಸ್ ಠಾಣೆ,
ಬೆಂಗಳೂರು ನಗರ

(ಹಿ.ಸ.ಸ. ಅಭಿಯೋಜಕರು)

**– ವಿರುದ್ಧ –**

**ಆರೋಪಿ**– ಶಿವಕುಮಾರ್ ಬಿನ್ ರಂಗಸ್ವಾಮಿ, 30 ವರ್ಷ,
ವಿಳಾಸ – ನಂ.534, ಹಳೆ ಯಳನಾಡು,
ಹಿರಿಯೂರು ತಾಲ್ಲೂಕು, ಚಿತ್ರದುರ್ಗ,
ಕರ್ನಾಟಕ.

(ಶ್ರೀ ಯೋಗೇಶ್.ಕೆ.ಎಂ., ವಕೀಲರು)

| | | |
|---|---|---|
| ಅಪರಾಧದ ದಿನಾಂಕ | – | 18–12–2024 |
| ಫಿರ್ಯಾದು ಮಾಡಲಾದ ಅಪರಾಧ | – | ಭಾ.ನ್ಯಾ.ಸಂ. ಕಲಂ 137(2) |
| ಆರೋಪಿಯು ಆರೋಪಗಳನ್ನು ಒಪ್ಪಿಕೊಂಡಿದ್ದಾರೆಯೇ | – | ಇಲ್ಲ |
| ಅಂತಿಮ ಆದೇಶ | – | ಆರೋಪಿಯನ್ನು ಬಿಡುಗಡೆಗೊಳಿಸಿದೆ |
| ತೀರ್ಪಿನ ದಿನಾಂಕ | – | 07–07–2026 |

**– ತೀರ್ಪು –**

ಬೆಂಗಳೂರು ನಗರದ ಪೀಣ್ಯ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಯ ವಿರುದ್ಧ ಭಾ.ನ್ಯಾಸಂ. ಕಲಂ 137(2)ರ ಅಪರಾಧಕ್ಕಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆ ಪ್ರಕರಣವು ಈ ಕೆಳಕಂಡಂತಿರುತ್ತದೆಃ

ಬೆಂಗಳೂರು ನಗರ, ಚೊಕ್ಕಸಂದ್ರ, ಮಾರುತಿ ಲೇಔಟ್, 2ನೇ ಎ ಕ್ರಾಸ್ ನಲ್ಲಿ, ನಂ.63, ನಾಗರಾಜು ಎಂಬುವರಿಗೆ ಸೇರಿರುವ ಬಿಲ್ಡಿಂಗ್ ನಲ್ಲಿನ ಮನೆಯಲ್ಲಿ ವಾಸವಾಗಿರುವ ಚಾಸಾ 1 ದೇವಮ್ಮ ಮತ್ತು ಚಾಸಾ 2 ಸಿದ್ದಪ್ಪರವರುಗಳ ಮಗಳಾದ ಅಪ್ರಾಪ್ತ ಬಾಲಕಿ ಚಾಸಾ 3 ಮೇಘನಾರವರನ್ನು ಆರೋಪಿಯು ಸುಮಾರು 3 ವರ್ಷಗಳಿಂದ ಪ್ರೀತಿಸುತ್ತಿದ್ದು, ಸದರಿ ವಿಚಾರ ಚಾಸಾ 2 ರವರಿಗೆ ಗೊತ್ತಾಗಿ ಚಾಸಾ 3 ರವರಿಗೆ ಬೈದು ಬುದ್ಧಿ ಹೇಳಿದ್ದರಿಂದ ಚಾಸಾ 3 ರವರು ಆರೋಪಿಗೆ ಫೋನ್ ಮಾಡಿರುತ್ತಾರೆ. ದಿನಾಂಕ 18-12-2024 ರಂದು ಸಂಜೆ ಸುಮಾರು 5.00 ಗಂಟೆ ನಂತರ ಆರೋಪಿಯು ಚಾಸಾ 3 ರವರನ್ನು ಕಾನೂನು ಬದ್ಧ ಪಾಲಕರ ಸಮ್ಮತಿ ಇಲ್ಲದೇ ಹಿರಿಯೂರಿಗೆ ಕರೆಸಿಕೊಂಡು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರಿಗೆ ಪರಿಚಯವಿದ್ದ ಚಾಸಾ 8 ಲಕ್ಷ್ಮೀರವರ ಮನೆಯಲ್ಲಿ ಸುಮಾರು 15 ದಿನಗಳ ಕಾಲ ಇರಿಸಿದ್ದರೆಂದು ಆರೋಪಿಸಲಾಗಿದೆ.

**3.** ತನಿಖಾಧಿಕಾರಿಯವರು ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿ, ನ್ಯಾಯಾಲಯವು ಆಪಾದಿಸಿದ ಅಪರಾಧಕ್ಕೆ ಸಂಜ್ಞೆ

ತೆಗೆದುಕೊಂಡಿರುತ್ತದೆ. ನಂತರದಲ್ಲಿ ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಅವರ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದಿರುತ್ತಾರೆ.

**4**. ನ್ಯಾಯಾಲಯವು ಅಭಿಯೋಜನೆ ಪ್ರಕರಣದ ದಾಖಲೆಗಳನ್ನು ಆರೋಪಿಗೆ ಒದಗಿಸಿ, ಉಭಯ ಪಕ್ಷಕಾರರ ವಾದ ಆಲಿಸಿದ ನಂತರ ಅವರ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಲಾಗಿ, ಆರೋಪಿಯು ಅದನ್ನು ನಿರಾಕರಿಸಿ ವಿಚಾರಣೆ ಆಗಬೇಕೆಂದು ಕೋರಿದ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ನಿಗದಿಪಡಿಸಲಾಗಿರುತ್ತದೆ.

**5.** ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಅಂತಿಮ ವರದಿಯಲ್ಲಿ ತೋರಿಸಲಾದ 15 ಸಾಕ್ಷಿದಾರರ ಪೈಕಿ 3 ಸಾಕ್ಷಿದಾರರನ್ನು ಅಸಾ 1 ರಿಂದ 3 ಎಂದು ವಿಚಾರಣೆ ಮಾಡಿ ಅವರ ಮೂಲಕ ನಿಪಿ 1 ರಿಂದ 6ರ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಗಳಾದ ಅಸಾ 1 ರಿಂದ 3 ರವರುಗಳು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸದಿರುವ ಕಾರಣ ಹಾಗೂ ಅಭಿಯೋಜನೆಯ ಪಾಟೀ ಸವಾಲಿನಲ್ಲಿ ತಾವು ಆರೋಪಿಯೊಂದಿಗೆ ರಾಜಿಯಾಗಿರುವುದಾಗಿ ಒಪ್ಪಿಕೊಂಡ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ

ಪ್ರಯೋಜನವಿಲ್ಲವೆಂದು ಪರಿಗಣಿಸಿ ಅಭಿಯೋಜನೆಯವರ ಮನವಿಯನ್ನು ತಿರಸ್ಕರಿಸಿ ಅವರುಗಳನ್ನು ವಿಚಾರಣೆಯಿಂದ ಕೈಬಿಟ್ಟು ಅಭಿಯೋಜನೆಯ ಸಾಕ್ಷ್ಯವನ್ನು ಮುಕ್ತಾಯಗೊಳಿಸಿದೆ.

**6.** ಅಸಾ 1 ರಿಂದ 3ರವರ ಸಾಕ್ಷ್ಯದಲ್ಲಿ ಆರೋಪಿಯನ್ನು ತಪ್ಪಿತಸ್ಥರೆಂದು ತೋರಿಸುವ ಯಾವುದೇ ಅಂಶಗಳು ಗೋಚರಿಸದ ಕಾರಣ ಅವರನ್ನು ಭಾ.ನಾ.ಸು.ಸಂ. ಕಲಂ 351 ರಡಿ ಹೇಳಿಕೆಯನ್ನು ದಾಖಲಿಸುವುದರಿಂದ ಮುಕ್ತಗೊಳಿಸಲಾಗಿದೆ.

**7.** ಉಭಯ ಪಕ್ಷಕಾರರ ಪರ ವಾದವನ್ನು ಆಲಿಸಿ, ನ್ಯಾಯಾಲಯದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಕಡತವನ್ನು ಪರಿಶೀಲನೆ ಮಾಡಲಾಗಿ ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿವೆಃ

1) ಬೆಂಗಳೂರು ನಗರ, ಚೊಕ್ಕಸಂದ್ರ, ಮಾರುತಿ ಲೇಔಟ್, 2ನೇ ಎ ಕ್ರಾಸ್ ನಲ್ಲಿ, ನಂ.63, ನಾಗರಾಜು ಎಂಬುವರಿಗೆ ಸೇರಿರುವ ಬಿಲ್ಡಿಂಗ್ ನಲ್ಲಿನ ಮನೆಯಲ್ಲಿ ವಾಸವಾಗಿರುವ ಅಸಾ 1 ದೇವಮ್ಮ ಮತ್ತು ಅಸಾ 3 ಸಿದ್ದಪ್ಪರವರುಗಳ ಮಗಳಾದ ಅಪ್ರಾಪ್ತ ಬಾಲಕಿ ಅಸಾ 2 ಮೇಘನಾರವರನ್ನು ಆರೋಪಿಯು ಸುಮಾರು 3 ವರ್ಷಗಳಿಂದ

ಪ್ರೀತಿಸುತ್ತಿದ್ದು, ಸದರಿ ವಿಚಾರ ಅಸಾ 3 ರವರಿಗೆ ಗೊತ್ತಾಗಿ ಅಸಾ 2 ರವರಿಗೆ ಬೈದು ಬುದ್ಧಿ ಹೇಳಿದ್ದರಿಂದ ಅಸಾ 2 ರವರು ಆರೋಪಿಗೆ ಫೋನ್ ಮಾಡಿದ್ದು, ದಿನಾಂಕ 18-12-2024 ರಂದು ಸಂಜೆ ಸುಮಾರು 5.00 ಗಂಟೆ ನಂತರ ಆರೋಪಿಯು ಅಸಾ 2 ರವರನ್ನು ಕಾನೂನು ಬದ್ಧ ಪಾಲಕರ ಸಮ್ಮತಿ ಇಲ್ಲದೇ ಹಿರಿಯೂರಿಗೆ ಕರೆಸಿಕೊಂಡು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರಿಗೆ ಪರಿಚಯವಿದ್ದ ಚಾಸಾ 8 ಲಕ್ಷ್ಮೀರವರ ಮನೆಯಲ್ಲಿ ಸುಮಾರು 15 ದಿನಗಳ ಕಾಲ ಇರಿಸಿದ್ದು, ಆ ಮೂಲಕ ಭಾ.ನ್ಯಾ.ಸಂ. 137(2)ರಡಿ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತುಪಡಿಸಿದ್ದಾರೆಯೇ?

2) ಏನು ಆದೇಶ?

**8.** ಅಭಿಯೋಜನೆಯವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಕೆಳಗೆ ಹೇಳಲಾದ ಕಾರಣಗಳಿಗಾಗಿ ಈ ಮುಂದಿನಂತೆ ಉತ್ತರಿಸುತ್ತೇನೆ.

ಅಂಶ 1 : ನಕಾರಾತ್ಮಕವಾಗಿ
ಅಂಶ 2 : ಅಂತಿಮ ಆದೇಶದಂತೆ

## ಕಾ ರ ಣ ಗ ಳು

**ಅಂಶ– 1:**

9. ಅಭಿಯೋಜನೆಯು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಫಿರ್ಯಾದಿಯನ್ನು ಅಸಾ 1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಅಸಾ 1 ದೇವಮ್ಮ ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿಲ್ಲ, ಆತ ತನ್ನ ಮಗಳು ಅಸಾ 2 ರವರನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಎನ್ನುತ್ತಾ ಆ ಬಗ್ಗೆ ತಾನು ಯಾವುದೇ ದೂರು ದಾಖಲಿಸಿರುವುದಿಲ್ಲ ಎಂದಿದ್ದಾರೆ. ನಿಪಿ 1 ದೂರು ಮತ್ತು ನಿಪಿ 2 ಮಹಜರ್ ಗಳಲ್ಲಿನ ತಮ್ಮ ಸಹಿಗಳನ್ನು ಮಾತ್ರ ಗುರ್ತಿಸಿದ ಅಸಾ 1 ರವರು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ ಎಂದಿದ್ದಾರೆ.

10. ಅಸಾ 2 ಮೇಘನಾ ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿಲ್ಲ, ಆತ ತನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ, ಯಾವುದೇ ರೀತಿ ಮುಟ್ಟಿರುವುದಿಲ್ಲ ಹಾಗೂ ಅಸಭ್ಯವಾಗಿ ನಡೆದುಕೊಂಡಿರುವುದಿಲ್ಲ, ಆ ಕುರಿತು ತಾನು ಪೊಲೀಸ್ ಠಾಣೆಯಲ್ಲಿ, ಪೊಲೀಸರ ಮುಂದೆ ಅಥವಾ ನ್ಯಾಯಾಧೀಶರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದಿದ್ದಾರೆ.

**11**. ಅಸಾ 3 ಸಿದ್ದಪ್ಪ ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿಲ್ಲ, ಆತ ತನ್ನ ಮಗಳು ಅಸಾ 2 ರವರನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ, ಯಾವುದೇ ರೀತಿ ಮುಟ್ಟಿರುವುದಿಲ್ಲ ಹಾಗೂ ಅಸಭ್ಯವಾಗಿ ನಡೆದುಕೊಂಡಿರುವುದಿಲ್ಲ, ಆ ಕುರಿತು ತಾನು ಪೊಲೀಸ್ ಠಾಣೆಯಲ್ಲಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದಿದ್ದಾರೆ.

**12**. ಪ್ರಾಜ್ಞ ಹಿ.ಸ.ಸ. ಅಭಿಯೋಜಕರು ಅಸಾ 1 ರಿಂದ 3 ರವರುಗಳನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಆದರೆ ಅಭಿಯೋಜನೆಯವರು ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಆರೋಪಿಸಿರುವಂತಹ ಘಟನೆ ಬಗ್ಗೆ ಯಾವುದೇ ಅಂಶಗಳನ್ನು ಹೊರತೆಗೆಯಲಾಗಿಲ್ಲ. ಅಸಾ 1 ರವರು ಪೊಲೀಸರು ತಾನು ತೋರಿಸಿದ ಸ್ಥಳದಲ್ಲಿ ತನ್ನ ಮತ್ತು ಪಂಚರ ಸಮಕ್ಷಮ ನಿಪಿ 2ರ ಮಹಜರ್ ಮಾಡಿರುವುದನ್ನು ಮತ್ತು ಪೊಲೀಸರ ಮುಂದೆ ನಿಪಿ 3 ರಂತೆ ಹೇಳಿಕೆ ನೀಡಿರುವುದನ್ನು ಅಲ್ಲಗಳೆದಿರುತ್ತಾರೆ. ಅಸಾ 2 ರವರು ಪೊಲೀಸರ ಮುಂದೆ ನಿಪಿ 4 ರಂತೆ ಮತ್ತು 1ನೇ ಜೆ.ಎಂ.ಎಫ್.ಸಿ. ಸಂಚಾರಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ನಿಪಿ 5 ರಂತೆ ಹೇಳಿಕೆ ನೀಡಿರುವುದನ್ನು ಅಲ್ಲಗಳೆದಿದ್ದಾರೆ. ಇನ್ನು ಅಸಾ 3 ರವರು ಪೊಲೀಸರ ಮುಂದೆ ನಿಪಿ 6 ರಂತೆ ಹೇಳಿಕೆ ನೀಡಿರುವುದನ್ನು ಅಲ್ಲಗಳೆದಿರುತ್ತಾರೆ.

**13.** ಅಭಿಯೋಜನೆಗೆ ಆರೋಪಿಯ ವಿರುದ್ಧ ಮಾಡಿದ ಆರೋಪಗಳನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ಅಸಾ 1 ರಿಂದ 3 ರವರುಗಳ ಸಾಕ್ಷ್ಯವು ಬಹಳ ಪ್ರಮುಖವಾಗಿರುತ್ತದೆ. ಆದರೆ ಅಸಾ 1 ರಿಂದ 3 ರವರುಗಳು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯದೇ ಘಟನೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ ಅಸಾ 1 ರಿಂದ 3 ರವರುಗಳು ಅಭಿಯೋಜನೆಯ ಪಾಟೀ ಸವಾಲಿನಲ್ಲಿ ತಾವು ಮತ್ತು ಆರೋಪಿ ರಾಜಿಯಾಗಿರುವುದನ್ನು ಒಪ್ಪಿರುತ್ತಾರೆ. ಹೀಗಾಗಿ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಲಾಗಿದೆ.

**14**. ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಲಾದ ಅಪರಾಧವನ್ನು ಪುಷ್ಠೀಕರಿಸುವಂತಹ ಯಾವುದೇ ಮೌಖಿಕ ಅಥವಾ ಲಿಖಿತ ಸಾಕ್ಷ್ಯಾಧಾರಗಳನ್ನು ಪೂರೈಸಿರುವುದಿಲ್ಲ. ಹೀಗಾಗಿ ಅಭಿಯೋಜನೆಯು ಆರೋಪಿಯ ವಿರುದ್ಧ ತಮ್ಮ ಪ್ರಕರಣವನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿದ್ದು, ಕಾನೂನಿನಲ್ಲಿ ಇತ್ಯರ್ಥವಾದ ತತ್ವಗಳ ಪ್ರಕಾರ ಆರೋಪಿಗೆ ಸಂಶಯದ ಲಾಭ ನೀಡಿ, ಮೇಲಿನ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**ಅಂಶ-2:**

**15**. ಮೇಲಿನ ಅಂಶಕ್ಕೆ ನೀಡಿದ ಉತ್ತರದಿಂದಾಗಿ, ಈ ಕೆಳಕಂಡಂತೆ ಮಾಡುವ-

**ಆದೇಶ**

ಭಾ.ನಾ.ಸು.ಸಂ. ಕಲಂ 271(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿಯನ್ನು ಅವರ ವಿರುದ್ಧ ಆರೋಪಿಸಲಾದ ಭಾ.ನ್ಯಾಸಂ. ಕಲಂ 137(2)ರ ಅಪರಾಧದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಭಾ.ನಾ.ಸು.ಸಂ. ಕಲಂ 481ರ ಪ್ರಕಾರ ಆರೋಪಿ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆ ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು ಅವರು ಅದನ್ನು ಗಣಕಯಂತ್ರಕ್ಕೆ ಅಳವಡಿಸಿ, ತೆಗೆದುಕೊಟ್ಟ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ದಿನಾಂಕ 07-07-2026ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

**(ಸಂಜೀವ್ ಕುಮಾರ್.ಎಸ್. ಹಿಂದೊಡ್ಡಿ)**
**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**

## ಅ ನು ಬಂ ಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

| | | |
|---|---|---|
| ಅಸಾ 1 | – | ದೇವಮ್ಮ |
| ಅಸಾ 2 | – | ಮೇಘನಾ |
| ಅಸಾ 3 | – | ಸಿದ್ದಪ್ಪ |

**ಅಭಿಯೋಜನೆ ಪರ ಗುರುತಿಸಲಾದ ನಿಶಾನೆಃ**

| | | |
|---|---|---|
| ನಿಪಿ 1 | – | ದೂರು |
| ನಿಪಿ 2 | – | ಮಹಜರ್ |
| ನಿಪಿ 3 | – | ಅಸಾ 1 ರವರು ಪೊಲೀಸರ ಮುಂದೆ ನೀಡಿರುವ ಹೇಳಿಕೆಯ ಭಾಗ |
| ನಿಪಿ 4 | – | ಅಸಾ 2 ರವರು ಪೊಲೀಸರ ಮುಂದೆ ನೀಡಿರುವ ಹೇಳಿಕೆಯ ಭಾಗ |
| ನಿಪಿ 5 | – | ಅಸಾ 2 ರವರು 1ನೇ ಜೆ.ಎಂ.ಎಫ್.ಸಿ. ಸಂಚಾರಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯ ಭಾಗ |
| ನಿಪಿ 6 | – | ಅಸಾ 3 ರವರು ಪೊಲೀಸರ ಮುಂದೆ ನೀಡಿರುವ ಹೇಳಿಕೆಯ ಭಾಗ |

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಃ**

ಇಲ್ಲ

**ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಇಲ್ಲ

**ಆರೋಪಿ ಪರ ಗುರುತಿಸಲಾದ ನಿಶಾನೆಃ**

ಇಲ್ಲ

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**

07-07-2026

ಪ್ರತ್ಯೇಕವಾಗಿ ತಯಾರಿಸಲಾದ ತೀರ್ಪನ್ನು
ಘೋಷಿಸಿದ್ದು ಅಂತಿಮ ಆದೇಶ ಈ ಕೆಳಕಂಡಂತಿರುತ್ತದೆ.

**ಆದೇಶ**

ಭಾ.ನಾ.ಸು.ಸಂ. ಕಲಂ 271(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿಯನ್ನು ಅವರ ವಿರುದ್ಧ ಆರೋಪಿಸಲಾದ ಭಾ.ನ್ಯಾಸಂ. ಕಲಂ 137(2)ರ ಅಪರಾಧದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಭಾ.ನಾ.ಸು.ಸಂ. ಕಲಂ 481ರ ಪ್ರಕಾರ ಆರೋಪಿ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆ ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**